# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 42

ಸ್ವಾಮಿ ನಿತ್ಯಸ್ಥಾನಂದ

ಒಂದು ದೊಣ್ಣೆಯನ್ನು ನೀರಿನ ಮೇಲೆ ಇರಿಸಿದಾಗ ಅದು ನೀರನ್ನು ಇಬ್ಭಾಗಿಸಿದಂತೆ ಕಾಣುತ್ತದೆ, ಆದರೆ ನೀರು ಇಬ್ಭಾಗವಾಗಿರುವುದಿಲ್ಲ; ಹಾಗೆಯೇ ‘ಅಹಂ’ ಜೀವ ಮತ್ತು ಬ್ರಹ್ಮರನ್ನು ಪ್ರತ್ಯೇಕಿಸಿದಂತೆ ಕಾಣುತ್ತದೆ, ಆದರೆ ನಿಜವಾಗಿಯೂ ಪ್ರತ್ಯೇಕವಾಗಿಲ್ಲ - ಇದು ಶ್ರೀರಾಮಕೃಷ್ಣರ ಹೇಳಿಕೆ. ಇಲ್ಲಿ ‘ಅಹಂ’ ಅನ್ನು ದೊಣ್ಣೆಗೆ ಹೋಲಿಸಿರುವುದು ತುಂಬ ಅರ್ಥಪೂರ್ಣವಾಗಿದೆ. ದೊಣ್ಣೆಯಿಂದ ಹೊಡೆದು ಇತರರನ್ನು ನೋಯಿಸಬಹುದು. ಹಾಗೆಯೇ ‘ಅಹಂ’ ಇತರರನ್ನು ನೋಯಿಸುತ್ತದೆ. ದೊಣ್ಣೆಯಿಂದ ವಸ್ತುಗಳನ್ನು ಒಡೆದು ಹಾಕಬಹುದು. ಹಾಗೆಯೇ ‘ಅಹಂ’ ಒಂದು ಕುಟುಂಬವನ್ನೂ ಒಂದು ಸಂಸ್ಥೆಯನ್ನೂ ಒಡೆಯುತ್ತದೆ.

ಭಗವಂತನೊಡನೆ ಒಂದಾದಾಗಲೇ ನಿಜವಾಗಿಯೂ ಭಗವಂತನನ್ನು ಅನುಭವಿಸಿದಂತಾಗುತ್ತದೆ. ಎಲ್ಲ ಹಂತದಲ್ಲಿಯೂ ಏಕತೆಯೇ ನಿಜವಾದ ಅನುಭವ. ಭೌತಿಕವಾಗಿ ಹೇಳುವುದಾದರೆ: ಬೆಂಕಿಯ ಬಗ್ಗೆ ನಾವು ಎಷ್ಟೇ ಕೇಳಬಹುದು, ನೋಡಬಹುದು, ತಿಳಿದುಕೊಳ್ಳಬಹುದು. ಆದರೆ ಅಗ್ನಿಸ್ಪರ್ಶವಾದಾಗಲೇ - ಅಗ್ನಿಯ ಶಾಖವು ದೇಹದೊಡನೆ ಒಂದಾದಾಗಲೇ ನಿಜವಾಗಿಯೂ ಬೆಂಕಿಯನ್ನು ಅನುಭವಿಸಿದಂತಾಗುತ್ತದೆ. ಹಾಗೆಯೇ ಮಾನಸಿಕವಾಗಿ ಕೋಪ ನಮ್ಮ ಮನಸ್ಸಿನೊಡನೆ ಒಂದಾದಾಗಲೇ - ನಾವು ಕೋಪಗೊಂಡಾಗಲೇ ಕೋಪವನ್ನು ಅನುಭವಿಸಿದಂತಾಗುತ್ತದೆ. ಹೀಗೆಯೇ ಆಧ್ಯಾತ್ಮಿಕ ಅನುಭವವೂ ಕೂಡ — ಜೀವ-ಬ್ರಹ್ಮೈಕ್ಯತೆ.

### ಕಲಿಯುಗದಲ್ಲಿ ಅನ್ನಗತಪ್ರಾಣ

**ಶ್ರೀರಾಮಕೃಷ್ಣ:** “ಜ್ಞಾನಯೋಗ ಬಹಳ ಕಠಿಣ. ದೇಹಾತ್ಮಬುದ್ಧಿ ಹೋಗದ ಹೊರತು ಜ್ಞಾನ ಉಂಟಾಗುವುದಿಲ್ಲ. ಕಲಿಯುಗದಲ್ಲಿ ಅನ್ನಗತಪ್ರಾಣ. ದೇಹಾತ್ಮ ಬುದ್ಧಿ, ಅಹಂಬುದ್ಧಿ ಹೋಗದು. ಆದ್ದರಿಂದ ಈ ಯುಗಕ್ಕೆ ಭಕ್ತಿಯೋಗವೇ ಔಷಧ. ಇದು ಬಹಳ ಸುಲಭವಾದ ಮಾರ್ಗ. ಹೃತ್ಪೂರ್ವಕ ವ್ಯಾಕುಲತೆಯಿಂದ ಆತನ ನಾಮಗುಣ ಕೀರ್ತನೆ ಮಾಡು, ಪ್ರಾರ್ಥನೆ ಮಾಡು, ಆತ ದೊರೆತುಬಿಡುತ್ತಾನೆ. ಇದರಲ್ಲಿ ಯಾವ ಸಂದೇಹವೂ ಇಲ್ಲ.” *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೩೦)*

ಕಲಿಯುಗದಲ್ಲಿ ಅನ್ನಗತ ಪ್ರಾಣ, ಅಂದರೆ ದೇಹಬುದ್ಧಿ ಅಧಿಕ. ಇದರಿಂದಾಗಿ ಭೌತಿಕ, ಆರ್ಥಿಕ ಅಭಿವೃದ್ಧಿಗೇ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಗುತ್ತಿದೆ (G.D.P). ಇದರಿಂದಲೇ ಶ್ರೀರಾಮಕೃಷ್ಣರ ಮಾತು ಎಷ್ಟು ಪ್ರಸ್ತುತ ಎಂದು ಕಂಡುಬರುತ್ತದೆ. ಈ ಅಭಿವೃದ್ಧಿಯ ಭರಾಟೆ ಸಮಾಜದ ಅವನತಿಯನ್ನು ಸೂಚಿಸುತ್ತದೆಯೇ ಎಂಬುದು ಪ್ರಶ್ನೆ. ನಮ್ಮ ಸಂಪ್ರದಾಯದ ೪ ಯುಗಗಳ ಪರಿಕಲ್ಪನೆಯ ಪ್ರಕಾರ ಸಮಾಜವು ಉನ್ನತಿಯಿಂದ ಅವನತಿಗೆ ಇಳಿಯುತ್ತಿದೆ. ವಿಕಾಸವಾದದ ಪ್ರಕಾರ ಅವನತಿಯಿಂದ ಉನ್ನತಿಗೇರುತ್ತದೆ. ಸಮಾಜದಲ್ಲಿ ಏರಿಳಿತಗಳಾಗುತ್ತಲೇ ಇರುತ್ತವೆ. ಯುಗಪರಿವರ್ತನೆ ಸೃಷ್ಟಿಯ ನಿಯಮ. ಕಲಿಯುಗದ ನಂತರ ಸತ್ಯಯುಗ, ಮುಂದೆ ಮತ್ತೆ ಕಲಿಯುಗ - ಹೀಗೆ ಇದು ಮುಂದುವರಿಯುತ್ತದೆ.



ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ:

**ಕಲಿಃ ಶಯಾನೋ ಭವತಿ ಸ ಜಾಗೃತ್ ದ್ವಾಪರಂ ಯುಗಮ್ ।**
**ಕರ್ಮಸ್ವಭ್ಯುದ್ಯತಃ ತ್ರೇತಾ ವಿಚರಂಸ್ತು ಕೃತಂ ಯುಗಮ್ ॥**

‘ಮಲಗಿಕೊಂಡಿದ್ದರೆ ಅದೇ ಕಲಿಯುಗ. ಎಚ್ಚರವಾಗಿದ್ದರೆ ದ್ವಾಪರ ಯುಗ. ಕೆಲಸ ಮಾಡಲು ಮೇಲೆದ್ದಾಗ ತ್ರೇತಾಯುಗ. ಚಟುವಟಿಕೆಯಲ್ಲಿ ತೊಡಗಿದ್ದರೆ ಅದೇ ಕೃತಯುಗ.’

ಈ ಶ್ಲೋಕವು ಸ್ವಾಮಿ ವಿವೇಕಾನಂದರ ಬಡಿದೆಬ್ಬಿಸುವ ಹೇಳಿಕೆಯೊಂದನ್ನು ನೆನಪಿಸಿಕೊಡುತ್ತದೆ: ‘Arise awake and stopnot till the goal is reached.’ (ಏಳಿ! ಎದ್ದೇಳಿ!! ಗುರಿಮುಟ್ಟುವವರೆಗೂ ನಿಲ್ಲದಿರಿ.)

### ಸ್ಪರ್ಶಮಣಿ ಶ್ರೀರಾಮಕೃಷ್ಣ

**ಶ್ರೀರಾಮಕೃಷ್ಣರು:** “ಹೌದು, ‘ದಾಸ ಅಹಂ’ ಎಂದರೆ ನಾನು ಭಗವಂತನ ದಾಸ, ನಾನು ಆತನ ಭಕ್ತ ಎಂಬ ಭಾವ ಕೆಡುಕಾದುದೇನಲ್ಲ. ಅದಕ್ಕೆ ಬದಲು ಅದು ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.. ಮನುಷ್ಯನಿಗೆ

ನಿಜವಾಗಿ ಆ ಭಾವ (ದಾಸ ಅಹಂ) ಬಂದಿರುವುದಾದರೆ, ಆತನಲ್ಲಿ ಕೇವಲ ಕಾಮಕ್ರೋಧಾದಿಗಳ ಸೋಗು ಉಳಿದುಕೊಳ್ಳುತ್ತದೆ. ಭಗವಂತನ ಸಾಕ್ಷಾತ್ಕಾರ ದೊರೆತ ನಂತರ ಆತನಲ್ಲಿ 'ದಾಸ ಅಹಂ' ಅಥವಾ 'ಭಕ್ತ ಅಹಂ' ಉಳಿದುಕೊಂಡರೆ ಆತ ಯಾರಿಗೂ ಕೆಡುಕನ್ನು ತರಲಾರ. ಕತ್ತಿ ಸ್ಪರ್ಶಮಣಿಯನ್ನು ಮುಟ್ಟಿದ ನಂತರ ಚಿನ್ನವಾಗಿ ಬಿಡುತ್ತದೆ. ಕತ್ತಿಯ ಆಕಾರವು ಹಾಗೆಯೇ ಉಳಿದುಕೊಳ್ಳುತ್ತದೆ. ಆದರೆ ಅದು ಯಾವುದನ್ನೂ ಕತ್ತರಿಸಲಾರದು.''

*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೩೦-೩೧)*

ನಾವು ಶ್ರೀರಾಮಕೃಷ್ಣರನ್ನೇ ಅಂತಹ ಸ್ಪರ್ಶಮಣಿ ಎಂದು ಪರಿಗಣಿಸಬಹುದು. ಅವರು ಅನೇಕ ಲೋಹದಂತಹ ವ್ಯಕ್ತಿಗಳನ್ನು ಚಿನ್ನದಂತಹ ವ್ಯಕ್ತಿಗಳನ್ನಾಗಿ ಪರಿವರ್ತಿಸಿದರು. ಲೋಹದಂತಹ ವ್ಯಕ್ತಿಗಳು ಎಂದರೆ ಸತ್ತ್ವಪೂರ್ಣ ವ್ಯಕ್ತಿಗಳು – ನರೇಂದ್ರನಾಥನಂತಹವರು. ಸ್ಪರ್ಶಮಣಿಯು ಸಾಮಾನ್ಯ ವಸ್ತುಗಳನ್ನು ಪರಿವರ್ತಿಸುವುದಿಲ್ಲ. ಹೃದಯರಾಮನಂತಹ ವ್ಯಕ್ತಿಗಳು ಶ್ರೀರಾಮಕೃಷ್ಣರ ಸಂಪರ್ಕದಲ್ಲಿಯೇ ಇದ್ದರೂ ಪರಿವರ್ತಿತರಾಗಲೇ ಇಲ್ಲ. ಆಂಗ್ಲಭಾಷೆಯಲ್ಲಿ ಒಂದೇ ರೀತಿ ಧ್ವನಿಸುವ ಎರಡು ಶಬ್ದಗಳಿವೆ: Metal (ಲೋಹ) ಮತ್ತು Mettle (ಅಂತಸತ್ತ್ವ). ಅಂದರೆ ಲೋಹದಂತೆ ಗಟ್ಟಿಯಾಗಿಯೂ ಇರಬೇಕು, ಅಂತಃಸತ್ತ್ವದಿಂದಲೂ ಶಕ್ತಿಯಿಂದಲೂ ಕೂಡಿರಬೇಕು. ಆಗಲೇ ಪರಿವರ್ತನೆ ಸಾಧ್ಯ. ಅಂತಹ ವ್ಯಕ್ತಿಗಳು ಶ್ರೀರಾಮಕೃಷ್ಣರಂತಹ ಸ್ಪರ್ಶವನ್ನು ನಿರೀಕ್ಷಿಸಿರುತ್ತಾರೆ. ಆ ಮ್ಯಾಜಿಕ್ ಸ್ಪರ್ಶದ ನಂತರ ಅವರು ಚಿನ್ನದಂತಹ ವ್ಯಕ್ತಿಗಳಾಗಿ ಬಿಡುತ್ತಾರೆ, ಅವರೆಂದೂ ಮೊದಲಿನಂತಿರುವುದಿಲ್ಲ.

## ಶ್ರೀರಾಮಕೃಷ್ಣರು ಮಗುವಿನಂತೆ

**ಶ್ರೀರಾಮಕೃಷ್ಣರು:** ''ತೆಂಗಿನ ಮರದ ಮಟ್ಟೆ ಒಣಗಿ ಕೆಳಕ್ಕೆ ಬಿದ್ದುಹೋಯಿತು ಎಂದರೆ, ಅದು ಒಂದು ಗುರುತನ್ನು ಬಿಡುತ್ತದೆ. ಆ ಗುರುತು ಹೇಳುತ್ತದೆ, ಒಮ್ಮೆ ಅಲ್ಲಿ ಒಂದು ಮಟ್ಟೆ ಇತ್ತು ಎಂಬುದಾಗಿ. ಅದೇ ರೀತಿಯಾಗಿ ಯಾರಿಗೆ ಭಗವಂತನ ಸಾಕ್ಷಾತ್ಕಾರವಾಗಿದೆಯೋ ಅವರ 'ಅಹಂ' ನ ಗುರುತು ಮಾತ್ರ ನಿಲ್ಲುತ್ತದೆ. ಕಾಮಕ್ರೋಧಾದಿಗಳ ಆಕಾರ ಮಾತ್ರ ಇರುತ್ತದೆ. ಆತ ಮಗುವಿನಂತಾಗಿ ಬಿಡುತ್ತಾನೆ. ಮಗುವಿಗೆ ಸತ್ತ್ವರಜಸ್ತಮೋ ಗುಣಗಳ ಸ್ಪರ್ಶ ಸ್ವಲ್ಪವೂ ಇಲ್ಲ. ಅದಕ್ಕೆ ಯಾವುದಾದರೂ ಒಂದು ವಸ್ತುವಿನ ಮೇಲೆ ಆಸಕ್ತಿ ಉಂಟಾಗಲು ಎಷ್ಟು ಸಮಯ ಬೇಕೋ, ಅಷ್ಟೇ ಸಮಯ ಸಾಕು ಅದರ ಮೇಲೆ ನಿರಾಸಕ್ತಿ ಉಂಟಾಗಲೂ ಕೂಡ...'' *(ಅಲ್ಲೇ, ಪು. ೧೩೧)*

ಪರಮಹಂಸರನ್ನು ಮಗುವಿಗೆ ಹೋಲಿಸುವುದು ವಾಡಿಕೆ. ಇದಕ್ಕೆ ಹಲವು ಕಾರಣಗಳಿವೆ:

೧) ''ನಾನು' ಎಂಬುದು ಅವರಲ್ಲಿ ಇರುವುದಿಲ್ಲ. ಅವರು ಮಾತಿನ ಮಧ್ಯೆ 'ನಾನು' ಎಂಬ ಶಬ್ದವನ್ನು ಬಳಸಬಹುದು, ಆದರೆ ಅದರ ಹಿಂದೆ ಅಹಂಭಾವವಿರುವುದಿಲ್ಲ. ಮಗುವಿನಲ್ಲಿ ಅದು ಇನ್ನೂ ಹುಟ್ಟಿರುವುದಿಲ್ಲ. ಪರಮಹಂಸರಲ್ಲಿ ಅದು ಹುಟ್ಟಿ ಬೆಳೆದು ನಾಶವಾಗಿರುತ್ತದೆ.

೨) ಅವರಲ್ಲಿ ಸರಳತೆ–ಸಹಜತೆ ಇರುತ್ತದೆ. ಅವರಿಗೆ ಯಾವುದನ್ನೂ ಮುಚ್ಚಿಡುವ ಆವಶ್ಯಕತೆ ಇರುವುದಿಲ್ಲ. ''ಮುಚ್ಚುಮರೆ ಮಾಳ್ಪುದಕೆ ಮುಸುಕು ಇಹುದೆಲ್ಲಿ?''

೩) ಆಸಕ್ತಿ–ಅನಾಸಕ್ತಿಗಳೆರಡೂ ಬರುತ್ತವೆ, ಹೋಗುತ್ತವೆ.

೪) ಅವರು ಸತ್ತ್ವರಜತೋಮಗುಣಗಳನ್ನು ಮೀರಿರುತ್ತಾರೆ. ಮಗುವಿನಲ್ಲಿ ಈ ಗುಣಗಳಿನ್ನೂ ಪಕ್ವವಾಗಿರುವುದಿಲ್ಲ.

೫) ಭೇದಭಾವ ಇರುವುದಿಲ್ಲ. ಕಳ್ಳನನ್ನು ಅವರು ಕಳ್ಳನೆಂದು ನೋಡುವುದಿಲ್ಲ. ಮಗುವಿನಲ್ಲಿ ಈ ಭೇದಭಾವ ಇನ್ನೂ ವ್ಯಕ್ತವಾಗಿರುವುದಿಲ್ಲ; ಪರಮಹಂಸರು ಅದನ್ನು ಮೀರಿಹೋಗಿರುತ್ತಾರೆ.

೬) ಮಗು ದ್ವೇಷ ಸಾಧಿಸುವುದಿಲ್ಲ, ಅದರಲ್ಲಿ ಅದು ಇನ್ನೂ ಜಾಗೃತವಾಗಿರುವುದಿಲ್ಲ. ಪರಮಹಂಸರು ಕ್ಷಮಾಗುಣದ ಮೂಲಕ ಅದನ್ನು ಮೀರಿಸುತ್ತಾರೆ. ಯೇಸುಕ್ರಿಸ್ತ ಹೇಳುತ್ತಾನೆ: ''I say unto you, Except, ye turn, and become as little as children, ye shall in no wise enter into the kingdom of heaven.''

('ನಾನು ನಿನಗೆ ಹೇಳುತ್ತೇನೆ, ನೀನು ಬದಲಾಗಿ ಚಿಕ್ಕ ಮಕ್ಕಳಂತೆ ಆಗದ ಹೊರತು, ಭಗವದ್ರಾಜ್ಯವನ್ನು ಪ್ರವೇಶಿಸುವ ಸಂಭವವಿಲ್ಲ.')

## ಭಕ್ತಿಯೋಗ

**ಶ್ರೀರಾಮಕೃಷ್ಣರು:** ''ಕೆಲವರು ಸಮಾಧಿ ದೊರೆತ ನಂತರವೂ 'ಭಕ್ತ ಅಹಂ' ಅಥವಾ 'ದಾಸ ಅಹಂ' ಇವನ್ನು ಇಟ್ಟುಕೊಂಡಿರುತ್ತಾರೆ. ಭಕ್ತ 'ಭಕ್ತ ಅಹಂ' ಇಟ್ಟುಕೊಂಡಿರುತ್ತಾನೆ. ಆತ ಹೇಳುತ್ತಾನೆ, 'ಹೇ ಭಗವಂತ, ನೀನು ಪ್ರಭು, ನಾನು ದಾಸ; ನೀನು ಭಗವಂತ, ನಾನು ಭಕ್ತ.' ಭಗವಂತನ ಸಾಕ್ಷಾತ್ಕಾರ ದೊರೆತ ನಂತರವೂ ಈ ಭಾವ ಆತನಲ್ಲಿರುತ್ತದೆ. ಆತನ 'ಅಹಂ' ಪೂರ್ಣವಾಗಿ ಹೊರಟುಹೋಗದು. ಈ ವಿಧದ ಭಾವವನ್ನು ಕಾರ್ಯತಃ ಆಚರಣೆಗೆ ತರುತ್ತ ತರುತ್ತ ಕೊನೆಗೆ ಭಗವಂತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ. ಇದಕ್ಕೇ ಭಕ್ತಿಯೋಗ ಎಂದು ಹೆಸರು.'' *(ಅಲ್ಲೇ, ಪು. ೧೩೧)*

ಶ್ರೀರಾಮಕೃಷ್ಣರ ಪ್ರಕಾರ ಯಥಾರ್ಥ ಭಕ್ತನಲ್ಲಿ ಮುಖ್ಯವಾಗಿ ಎರಡು ಲಕ್ಷಣಗಳಿರಬೇಕು: ಅವನು ಶಿಶುವಿನಂತಿರಬೇಕು (ಬಾಲಿಶನಾಗಿರಬಾರದು), ಅಂದರೆ ಅತ್ಯಂತ ಸರಳನಾಗಿರ

ಬೇಕು; ಎರಡನೆಯದಾಗಿ ಅವನು ದಾಸನಾಗಿರಬೇಕು, ಅಂದರೆ ದೈನ್ಯತೆ ಇರಬೇಕು (ದಾಸ್ಯ ಮನೋಭಾವ ಇರಬಾರದು). ದಾಸರಾಗಿರುವವರೆಲ್ಲರೂ ದೈನ್ಯರಾಗಿರುತ್ತಾರೆಂದು ಹೇಳಲಾಗುವುದಿಲ್ಲ. ಅನೇಕರು ಕೆಲವರಿಗೆ ದಾಸರಾಗಿರುತ್ತಾರೆ, ಹಾಗೂ ಇತರರಿಗೆ 'ಬಾಸ' ರಾಗಿರುತ್ತಾರೆ (boss). ಒಬ್ಬ ರಾಜನೂ ದೈನ್ಯನಾಗಿರಬಹುದು. ದೈನ್ಯತೆಯೊಂದಿಗೆ ರಾಜನಂತಿರಬೇಕು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''Be a king with all humility'' ಶ್ರೀ ಚೈತನ್ಯ ಮಹಾಪ್ರಭು 'ಶಿಕ್ಷಾಷ್ಟಕ'ದಲ್ಲಿ ಹೇಳುತ್ತಾರೆ: **ಅಮಾನಿನಾ ಮಾನದೇನ ಕೀರ್ತನೀಯಃ ಸದಾ ಹರಿಃ** – 'ತಾನು ಮಾನ್ಯತೆಯನ್ನು ಬಯಸದೆ, ದೈನ್ಯನಾಗಿದ್ದು, ಇತರರಿಗೆ ಮಾನ್ಯತೆಯನ್ನು ನೀಡುತ್ತ ಯಾವಾಗಲೂ ಹರಿಯನ್ನು ಕೀರ್ತಿಸುತ್ತಿರಬೇಕು.'

'ಭಕ್ತ ಅಹಂ', 'ದಾಸ ಅಹಂ' ಭಾವವನ್ನು ಸಾಧಕರೂ ಉಳಿಸಿಕೊಳ್ಳಬೇಕು, ಈ ಭಾವದೊಂದಿಗೆ ನಾವು ಸಾಧನೆ ಮಾಡಬೇಕು ಮತ್ತು ನಮ್ಮ ಎಲ್ಲ ವ್ಯವಹಾರ, ನಡೆ-ನುಡಿಗಳಲ್ಲಿ ಈ ಭಾವ ವ್ಯಕ್ತವಾಗಬೇಕು — ಇದು ಶ್ರೀರಾಮಕೃಷ್ಣರ ಅಭಿಪ್ರಾಯ. ಸಾಕ್ಷಾತ್ಕಾರವಾದವರಿಗೆ ಈ ಭಾವ ಸ್ವಾಭಾವಿಕವಾಗಿರುತ್ತದೆ, ಸಾಧಕರಿಗೆ ಇದು ಸಾಧನೆಯಾಗಬೇಕು. ಇದೇ ಅಭಿಪ್ರಾಯವನ್ನು ಶ್ರೀಶಂಕರಾಚಾರ್ಯರು, ಭಗವದ್ಗೀತೆಯ ಎರಡನೆ ಅಧ್ಯಾಯದಲ್ಲಿ ಬರುವ ಸ್ಥಿತಪ್ರಜ್ಞನ ಲಕ್ಷಣಗಳ ಕುರಿತಾದ ತಮ್ಮ ಭಾಷ್ಯದಲ್ಲಿ ವ್ಯಕ್ತಪಡಿಸಿದ್ದಾರೆ: **ಯಾನಿ ಕೃತಾರ್ಥ ಲಕ್ಷಣಾನಿ ತಾನಿ ಏವ ಸಾಧನಾನಿ ಉಪದಿಶ್ಯಂತೇ ಯತ್ನಸಾಧ್ಯತ್ವಾತ್**– 'ಕೃತಾರ್ಥರಾದವರ ಲಕ್ಷಣಗಳೇ (ಇತರರಿಗೆ) ಸಾಧನೆಗಳಾಗುತ್ತವೆ. ಏಕೆಂದರೆ ಆ ಲಕ್ಷಣಗಳನ್ನು ಅನುಸರಿಸುವುದರ ಮೂಲಕ ಇತರರೂ ಕೃತಾರ್ಥರಾಗಬಹುದು.'

## ಅದ್ವೈತದಿಂದ ದ್ವೈತಕ್ಕೆ

ಶ್ರೀರಾಮಕೃಷ್ಣರು: ''ಸಕ್ಕರೆಯಾಗಲು ಇಚ್ಛೆಯಿಲ್ಲ, ಸಕ್ಕರೆ ತಿನ್ನಲು ಇಚ್ಛೆ. ನನಗೆ ಎಂದಿಗೂ ಇಚ್ಛೆಯಾಗುವುದಿಲ್ಲ, 'ನಾನು ಬ್ರಹ್ಮ' ಅಂತ ಹೇಳಲು. ನಾನು ಹೇಳುತ್ತೇನೆ: 'ನೀನು ಭಗವಂತ, ನಾನು ನಿನ್ನ ದಾಸ'... — ನನಗೆ ಆತನ ನಾಮಗುಣಕೀರ್ತನೆ ಮಾಡಿಕೊಂಡಿರಬೇಕೆಂಬದು ಇಚ್ಛೆ. ಸೇವ್ಯಸೇವಕ ಭಾವ ಬಹಳ ಒಳ್ಳೆಯದು. ಮತ್ತೆ ನೋಡು, ಅಲೆ ಗಂಗೆಯದು ಎಂದು ಜನ ಹೇಳುತ್ತಾರೆಯೇ ಹೊರತು ಗಂಗೆ ಅಲೆಯದು ಎಂದು ಯಾರೂ ಹೇಳುವುದಿಲ್ಲ. 'ನಾನೇ ಅವನು' ಎಂಬ ಭಾವ ಒಳ್ಳೆಯದಲ್ಲ. ದೇಹಾತ್ಮ ಬುದ್ಧಿ ಇನ್ನೂ ಇರುವಾಗಲೇ ಮನುಷ್ಯ ಹೀಗೆ ಭಾವಿಸಿದರೆ ಆತನಿಗೆ ವಿಶೇಷ ಹಾನಿ ಬಂದೊದಗುತ್ತದೆ. ಆತ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಲಾರದೆ ಕ್ರಮೇಣ ಅಧಃಪತನಕ್ಕೆ ಇಳಿದುಬಿಡುತ್ತಾನೆ. ಪರರನ್ನೂ ಮೋಸಗೊಳಿಸುತ್ತಾನೆ, ತಾನೂ ಮೋಸಹೋಗುತ್ತಾನೆ. ಆತನಿಗೆ ತನ್ನ ಮಾನಸಿಕ ಅವಸ್ಥೆ ಏನು ಎಂಬುದನ್ನು ಅರಿತುಕೊಳ್ಳಲಾಗುವುದಿಲ್ಲ.'' *(ಅಲ್ಲೇ, ಪು. ೧೩೨)*

ಯಾರು ಸಕ್ಕರೆಯನ್ನು ಅನುಭವಿಸುವವರೋ ಅವರು ಮಾತ್ರ 'ಸಕ್ಕರೆಯಾಗಲು ಇಚ್ಛೆಯಿಲ್ಲ, ಸಕ್ಕರೆ ತಿನ್ನಲು ಇಚ್ಛೆ' ಎಂದು ಹೇಳಲು ಸಾಧ್ಯ. ಹಾಗೆಯೇ ಶ್ರೀರಾಮಕೃಷ್ಣರು ಅದ್ವೈತಾನುಭವವನ್ನು ಪಡೆದ ಮೇಲೆ ದ್ವೈತಾವಸ್ಥೆಯಲ್ಲಿ ಇರಲು ಬಯಸಿದರು. ಒಂದು ಸಕ್ಕರೆಯ ಬೊಂಬೆಯು ಸಕ್ಕರೆ ಸವಿ ನೋಡಲು ಅದನ್ನರಸಿಕೊಂಡು ಹೋಗುತ್ತದೆ. ಸಕ್ಕರೆಯನ್ನು ತಿನ್ನುತ್ತಿರುವಾಗ ತಿಳಿಯುತ್ತದೆ, ತಾನೇ ಸಕ್ಕರೆ ಎಂದು. ಇದು ಬೆಲ್ಲದ ಗಣಪತಿಗೆ ಬೆಲ್ಲವನ್ನೇ ನೈವೇದ್ಯ ಮಾಡಿದಂತೆ. ಸಕ್ಕರೆಯ ಬೊಂಬೆಯು ಸಕ್ಕರೆಯನ್ನು ಅರಸಿಕೊಂಡು ಹೋಗುವುದಕ್ಕೆ ಕಾರಣ ತಾನೇ ಸಕ್ಕರೆಯಾಗಿರುವುದರಿಂದ. ಸಮಾನವಾದವುಗಳ ನಡುವೆ ಆಕರ್ಷಣೆ ಸ್ವಾಭಾವಿಕ. ಭಗವಂತನೆಡೆಗೆ ಇರುವ ಆಕರ್ಷಣೆಗೂ ನಾವೆಲ್ಲರೂ ಭಗವತ್ ಸ್ವರೂಪರಾಗಿರುವುದರಿಂದ. ಎಲ್ಲರೂ ಭಗವಂತನೊಡನೆ ಒಂದಾಗಲು ಮುಂದುವರಿಯುತ್ತಿದ್ದಾರೆ – ಕೆಲವರು ಮಂದಗತಿಯಲ್ಲಿ, ಕೆಲವರು ತ್ವರಿತವಾಗಿ, ಕೆಲವರು ಸುತ್ತುಬಳಸು ಮಾರ್ಗವಾಗಿ, ಮತ್ತೆ ಕೆಲವರು ನೇರವಾಗಿ, ಕೆಲವರು ಎಡವಿ ಬೀಳುತ್ತ, ಇನ್ನಿತರರು ತುಂಬ ಎಚ್ಚರಿಕೆಯಿಂದ. ಅಂತೂ ಕೊನೆಯಲ್ಲಿ ಎಲ್ಲರೂ ಭಗವಂತನೊಡನೆ ಒಂದಾಗುತ್ತಾರೆ, ಮತ್ತೆ ಹಿಂದಿರುಗುವುದಿಲ್ಲ.

ಶ್ರೀ ಅಲ್ಲಮಪ್ರಭುಗಳ ವಚನವೊಂದಿದೆ:

**ಕರ್ಪೂರದ ಗಿರಿಯ ಉರಿಯು ಹಿಡಿದೆಡೆ ಇದ್ದಿಲುಂಟೆ ?**
**ಮಂಜಿನ ಶಿವಾಲಯಕ್ಕೆ ಬಿಸಿಲ ಕಲಶವುಂಟೆ ?**
**ಕೆಂಡದ ಗಿರಿಯನರಗಿನ ಬಾಣದಲೆಚ್ಚಡೆ**
**ಮರಳಿ ಬಾಣವನರಸಲುಂಟೆ?**
**ಗುಹೇಶ್ವರನೆಂಬ ಲಿಂಗವನರಿದು**
**ಮರಳಿ ನೆನೆಯಲುಂಟೆ ?**

ಕರ್ಪೂರದ ಗಿರಿಗೆ ಬೆಂಕಿಬಿದ್ದರೆ ಅದು ಸಂಪೂರ್ಣ ಉರಿದು ಹೋಗುತ್ತದೆ. ಏನೂ ಉಳಿಯುವುದಿಲ್ಲ. ಹಾಗೆಯೇ ಬ್ರಹ್ಮ ಜ್ಞಾನಾಗ್ನಿಯಿಂದ ಸಾಧಕನ ಅಹಂ ವಿಶೇಷವಾಗಿ ನಾಶವಾಗುತ್ತದೆ. ಮಂಜಿನ ಶಿವಾಲಯಕ್ಕೆ ಬಿಸಿಲು ತಾಕಿದರೆ ಅದು ಕರಗಿ ಹೋಗುತ್ತದೆ. ತನ್ನ ನಾಮ-ರೂಪವನ್ನು ಕಳೆದುಕೊಳ್ಳುತ್ತದೆ. ಹಾಗೆಯೇ ಸಾಧಕನು ಬ್ರಹ್ಮಾನುಭವದ ನಂತರ ನಾಮರೂಪ ಶೂನ್ಯನಾಗುತ್ತಾನೆ, ದೇಶಮಿತಿಯನ್ನು ಕಳೆದುಕೊಳ್ಳುತ್ತಾನೆ. ಕೆಂಡದ ಗಿರಿಗೆ ಅರಗಿನ ಬಾಣವನ್ನು ಬಿಟ್ಟರೆ ಅದು ಅಲ್ಲಿ ಕರಗಿಹೋಗುತ್ತದೆ, ಮತ್ತೆ ಹಿಂತಿರುಗುವುದಿಲ್ಲ. (**ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ** – 'ಯಾವುದನ್ನು ಪಡೆದಮೇಲೆ ಮತ್ತೆ ಹಿಂತಿರುಗುವುದಿಲ್ಲವೋ ಅದೇ ನನ್ನ ಪರಮ ಧಾಮ' ಎಂದು ಶ್ರೀಕೃಷ್ಣನು ಹೇಳುತ್ತಾನೆ.)

*(ಮುಂದುವರಿಯುವುದು)*